doc-565
T.P-2.

Reg No B G 155 18 — 10 —72

In The State **First Golden Jubilee Celebrated Paper 'Satyavadi' daily, Mysore**

ನಂ. ಡಿಎಸ್‌ಆರ್/ಎಡಿವಿಟಿ. 12/72 ಕ್ಯಾಂಪ್ : ಮೈಸೂರು 15 10 1972

ಮೈಸೂರು ದಸರಾ ಸಾಂಸ್ಕೃತಿಕ ಮತ್ತು ಚಲನಚಿತ್ರ ಉತ್ಸವಗಳು

1972

ಪ್ರಖ್ಯಾತ ಚಿತ್ರ ಕಲಾವಿದರಾದ

ಜಯಭಾದುರಿ, ಅಮಿತಾಬ್‌ಬಚನ್

ಮತ್ತು **ಎಂ. ಜಿ. ರಾಮಚಂದ್ರನ್**

ಅವರು 20 ನೇ ಅಕ್ಟೋಬರ್ 1972 ರಂದು ಮೈಸೂರು ದಸರಾ ವಸ್ತುಪ್ರದರ್ಶನ ಪ್ರದೇಶದಲ್ಲಿ ಲಕ್ಕಿ-ಡಿಪ್ ಟಿಕೆಟ್‌ಗಳನ್ನು ಎತ್ತುವರು ಮತ್ತು ಬಹುಮಾನ ವಿನಿಯೋಗವನ್ನು ಮಾಡುವರು.

ಆ ದಿನ ಮಾರಾಟ್ಮಾಡಲಾದ ಮಾಮೂಲಿ ಪ್ರವೇಶ ಟಿಕೆಟ್‌ಗಳ ಮೇಲೆ ಬಹುಮಾನಗಳನ್ನು ಎತ್ತಲಾಗುವುದು

ಪ್ರವೇಶ ದರ ಒಂದು ರೂಪಾಯಿ ಮಾತ್ರ

ಬಹುಮಾನಗಳು

ಮೊದಲನೆ ಬಹುಮಾನ ರೂ. 500/- ಬೆಲೆ ಬಾಳುವ ರೇಡಿಯೋ
ಎರಡನೆ ಬಹುಮಾನ ರೂ. 300/- ಬೆಲೆ ಬಾಳುವ ಟ್ರಾನ್ಸಿಸ್ಟರ್ ರೇಡಿಯೋ
ಮೂರನೆ ಬಹುಮಾನ ರೂ. 250/- ಬೆಲೆ ಬಾಳುವ ಬೈಸಿಕಲ್
ನಾಲ್ಕನೆ ಬಹುಮಾನ ರೂ. 200/- ಬೆಲೆ ಬಾಳುವ ಪ್ರೆಷರ್ ಕುಕ್ಕರ್

ಮೈಸೂರು ದಸರಾ ಸಾಂಸ್ಕೃತಿಕ ಮತ್ತು ಚಲನಚಿತ್ರ ಉತ್ಸವ ಉಪ ಸಮಿತಿ ಅಧ್ಯಕ್ಷರಿಂದ ಪ್ರಕಟಿಸಲ್ಪಟ್ಟಿದೆ

ವುಡ್‌ಲಾಂಡ್ 13-10-72 ರಿಂದ ಆಮೋಘ 3 ನೇ ವಾರ

ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಅಪೆದಾ 13 10 72 ರಿಂದ

ಬಾಂಧವ್ಯ

ಪಾತ್ರ : ಅಶ್ವಥ್, ಗಂಗಾಧರ್, ರಾಜೇಶ್, ಬಿ. ವಿ ರಾಧ,

Edited Printed and Published by Dharmapracharanirata M S Krishna Rao (Propretor) at the Satyavad. Press Chamarajapuram Mysore

ಇಂದಿರಾರ ಬಗ್ಗೆ ಆಪಾದಿಸಲಿಲ್ಲವಂತೆ

ಶಿವಮೊಗ್ಗಾ ಜಿಲ್ಲಾ ಕಾಂಗ್ರೆಸಿನ ಕಾರ್ಯದರ್ಶಿ ಶೀರನಹಳ್ಳಿ ಚಂದ್ರಶೇಖರ್‌ರವರು ತಾವು ಇಂದಿರಾ ಗಾಂಧಿಯವರ ಬಗ್ಗೆ ತಾ|| 14 ರಲ್ಲಿ ಪ್ರಕಟವಾಗಿರುವಂತೆ ಹೇಳಲಿಲ್ಲವೆಂದಿರುವರು – ರಾಜ್ಯದಲ್ಲಿ ಇಂದಿರಾ ಗಾಂಧಿಯವರ ನಾಯಕತ್ವಕ್ಕೆ ತಾವು ಪ್ರಥಮ ಬೆಂಬಲಿಗರೆಂದೂ, ಅವರನ್ನು ತಾಯಿಯಂತೆ ಗೌರವಿಸುತ್ತಿರುವೆನೆಂದೂ, ತನ್ನ ತಾಯಿಯಂತೆ ಕಾಣುತ್ತಿರುವೆನೆಂದೂ ಹೇಳಿರುವರು.

★

ರಸಾಯನಿಕ ಗೊಬ್ಬರ ಸರಬರಾಜು

ಹುಬ್ಬಳ್ಳಿ— ರಾಜ್ಯದ ತಕ್ಷಣದ ಅವಶ್ಯಕತೆಗೆ ಮತ್ತೂ 90000 ಟ್ ರಸಾಯನಿಕ ಗೊಬ್ಬರವನ್ನು ಸರಬರಾಜುಮಾಡಲು ತಾವು ತಮ್ಮ ಕೈಲಾದ್ದನ್ನು ಮಾಡುವುದಾಗಿ ಕೇಂದ್ರ ಸ್ಟೀಟ್ ವ್ಯವಸಾಯ ಮಂತ್ರಿ ಶ್ರೀ ಶಿಂಡೆಯವರು ವಾಗ್ದಾನಮಾಡಿರುವರೆಂದು ರಾಜ್ಯದ ವ್ಯವಸಾಯ ಮಂತ್ರಿ ಶ್ರೀ ಕೆ. ಹೆಚ್. ಪಾಟೀಲರು ಪತ್ರಿಕೆಯವರಿಗೆ ತಿಳಿಸಿದರು.

★

ಸಿನಿಮಾ ರಾಷ್ಟ್ರೀಕರಣ

ಚಂಡೀಘರ್– ಪಂಜಾಬಿನಲ್ಲಿ ಸಿನಿಮಾ ಮಂದಿರಗಳ ರಾಷ್ಟ್ರೀಕರಣ ಮಾಡಲು ಈ ಸಂಬಂಧದ ಉಪಸಮಿತಿ ಶಿಫಾರಸ್ಸು ಮಾಡಿದೆ.

ಬಂಗ್ಲಾದೇಶದ ಮೇಲಿನ ದ್ವೇಷ

ಹಾಂಕಾಂಗ್— ಪಾಕಿಸ್ತಾನಿ ಪೋಲೀಸು ಪ್ಯಾದೆಯು ಬಂಗ್ಲಾದೇಶದ ತನ್ನ ಮೇಲಧಿಕಾರಿ ಸಾರ್ಜೆಂಟನ್ನು ಗುಂಡಿಕ್ಕಿ ಕೊಂದನು : ಕಾರಣ– ಪ್ಯಾದೆ ತನ್ನ ಮೇಲಧಿಕಾರಿ ಬಂಗ್ಲಾದೇಶೀಯ ಸಾರ್ಜೆಂಟಿನಿಂದ ಸರದಿ ವಹಿಸಲು ಮುಖ್ಯವಾದ ಗಾರ್ಡ್ ರೂಂಗೆ ಬಂದನು – ಆಗ ಇವರಿಬ್ಬರಲ್ಲಿ, ಬಂಗ್ಲಾದೇಶ, ಮುಜಬರ್,. ಭುಟ್ಟೋ, ಭಾರತ. ಚೀನಾ ವಿಷಯ ಕುರಿತು ತೀವ್ರ ವಾಗ್ವಾದ ನಡೆಯಿತು – ಸಾರ್ಜೆಂಟು ಕೊಠಡಿಯಿಂದ ಹೊರಟಾಗ ಪ್ಯಾದೆಯು ಅವನ ಮೇಲೆ ಮೂರು ಸಾರಿ ಗುಂಡು ಹಾರಿಸಲು ಅವನು ಸತ್ತು ಬಿದ್ದನು – ಪ್ಯಾದೆ ಬಂಧಿಸಲ್ಪಟ್ಟನು.

ಆರೋಗ್ಯ ತೆರಿಗೆ

ಬೈದರಾಬಾದು— ತನ್ನ ವೈದ್ಯಕೀಯ ಮತ್ತು ಆರೋಗ್ಯ ಕಾರ್ಯಕ್ರಮಗಳಿಗಾಗಿ ಕೇಂದ್ರ ಸರಕಾರವು ಆರೋಗ್ಯ ತೆರಿಗೆ ವಿಧಿಸಲು ಯೋಚಿಸುತ್ತಿರುವದೆಂದು ಆರೋಗ್ಯ ಮಂತ್ರಿ ಕುಟುಂಬ ಯೋಜನಾ ಉಪ ಮಂತ್ರಿ ಶ್ರೀ ಕಿಸ್ಕು ಹೇಳಿದರು.

★

ಇವರ ಗಲಾಟೆ ಬೇರೆ

ಮದರಾಸು– ರಾಜ್ಯದಲ್ಲಿ ಪಾನನಿರೋಧವನ್ನು ಪುನಃ ಜಾರಿಗೆ ತರದಿದ್ದರೆ, ನೇರ ಕಾರ್ಯಾಚರಣೆ ಕೈಗೊಳ್ಳಲಾಗುವದೆಂದು ತಮಿಳುನಾಡು ಶ್ರಮಜೀವಿ ಕಲ್ಯಾಣ ಸಂಘ ಬೆದರಿಕೆ ಹಾಕಿದೆ.

★

ಅಣ್ಣಾ ಡಿಎಂಕೆ

ಮದರಾಸು— ಡಿಎಂಕೆ ಗೆ ಸವಣಾಂತರವಾಗಿ ಎಂ. ಜಿ. ಆರ್. ಬೆಂಬಲಿಗರು ಮತ್ತು ಅನುಯಾಯಿಗಳಿಂದ ಸ್ಥಾಪಿಸಲ್ಪಟ್ಟಿರುವ ಅಣ್ಣಾ ಡಿಎಂಕೆ ಪಕ್ಷವು ಇಂದು ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿತು.

●

ಸ್ವಂತ ಚಿಂತನೆ

ಮೈಸೂರು— ಸಹಕಾರ ಸಂಸ್ಥೆಗಳ ವಿಭಾಗದ ಹಣವನ್ನು ದೇಶದ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಲು ಅನುಕೂಲಿಸುವ ರೀತಿಯಲ್ಲಿ ನವೀಕರಿಸುವ ಅಗತ್ಯವಿದೆಯೆಂದು ಶ್ರೀ ಅಜೀಜ್ ಸೇಟ್ ಮಂತ್ರಿಗಳವರು ಕೈಗಾರಿಕಾ ಸಹಕಾರ ಸಂಘದ ಹೊಸ ಕಟ್ಟಡವನ್ನು ಉದ್ಘಾಟಿಸುತ್ತಾ ಹೇಳಿದರು.

★

ಬಸ್ ಸ್ಟೇಷ

ಮೈಸೂರು— ಬಸ್ ಸ್ಟೇಷ ಕಟ್ಟಡದ ಶಂಕು ಸ್ಥಾಪನೆ ಮಾಡುತ್ತಾ, ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್‌ರವರು– ಸಾರಿಗೆ ಸಂಸ್ಥೆಯು ಮಿತವ್ಯಯದಿಂದ ಅಭಿವೃದ್ಧಿ ನಿಧಿಯನ್ನು ಹೊಂದುವಂತೆ ತಿಳಿಸಿದರು – ಅಧ್ಯಕ್ಷತೆ ವಹಿಸಿದ್ದ ಸಾರಿಗೆ ಮಂತ್ರಿ ಶ್ರೀ ಅಜೀಜ್ ಸೇಟ್‌ರವರು, ಇನ್ನೂ ರಾಷ್ಟ್ರೀಕರಣವಾಗದ ಮಾರ್ಗಗಳಿದ್ದು, ಅವುಗಳನ್ನು ವಹಿಸಿಕೊಳ್ಳಲು ರೂ. 10–15 ಕೋಟಿ ಅವಶ್ಯಕವಿರುವದೆಂದೂ, ಸಾಲ ಪಡೆಯಲು ಮುಖ್ಯ ಮಂತ್ರಿಗಳು ಅನುವ್ಯವಸ್ಥೆ ಮಾಡಬೇಕೆಂದೂ ಹೇಳಿದರು.

ವಿವಿಧ ವಾರ್ತೆಗಳು

★

ನವದೆಹಲಿ— ಭೂ ಕಂದಾಯ ವಜಾ ಮಾಡುವ ವಿಷಯದಲ್ಲಿ ಪ್ಲಾನಿಂಗ್ ಕಮಿಷನ್ ಇಚ್ಛೆ ಹೊಂದಿಲ್ಲವೆನ್ನಲಾಗಿದೆ.

ವಾಷಿಂಗ್ಟನ್— ಸೆನೇಟು ರೂ. 292 ಸಾವಿರ ಕೋಟಿ ವಿದೇಶೀ ನೆರವಿನಲ್ಲಿ ರೂ. ರೂ. 376.24 ಕೋಟಿಯಷ್ಟನ್ನು ಖೋತಾ ಮಾಡಿದೆ.

ನವದೆಹಲಿ— ಮುಲ್ಕಿ ನಿಬಂಧನೆಗಳು ಸರಿಯಾಗಿವೆ ಎಂದು ಸುಪ್ರೀಂ ಕೋರ್ಟು ಇತ್ತ ತೀರ್ಪಿನಿಂದ ಪಾರಾಗಲು ಕೇಂದ್ರ ಮತ್ತು ಆಂಧ್ರ ಸರಕಾರಗಳು ಕ್ಷಿಪ್ರದಲ್ಲೇ ಸುಗ್ರೀವಾಜ್ಞೆ ಹೊರಡಿಸುವ ಸಂಭವವಿದೆ ಎಂದು ಹೇಳಲಾಗಿದೆ.

ಟೋಕಿಯೊ— ಜಪಾನಿನ 13500 ಕೋಟಿ ರೂ.ಗಳ ಅಗಾಧ ರಕ್ಷಣಾ ಯೋಜನೆಯು ಪಾರ್ಲಿಮೆಂಟಿನ ಮುಂದೆ ಮುಂಜೂರಾತಿಗೆ ಬರಲಿದೆ.

ನವದೆಹಲಿ— 1971 ರಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ದೇಶಗಳಲ್ಲಿ ವ್ಯವಸಾಯ ಉತ್ಪಾದನೆ ಕಡಮೆಗೊಂಡಿರುವ ಬಗ್ಗೆ ಅದರ ಡೈರೆಕ್ಟರ್-ಜನರಲ್ ತವಕ ಕಳವಳ ವ್ಯಕ್ತಪಡಿಸಿರುವರು.

ನವದೆಹಲಿ— ಒಳಗುಂಪುಗಳ ಗಡಬಿಡಿಯಲ್ಲಿ ಸಿಕ್ಕಿಬಿದ್ದಿರುವ ತಮಿಳುನಾಡು ಆಡಳಿತ ಪಕ್ಷ ಡಿಎಂಕೆ ಯ ಒಳವಿಚಾರದಲ್ಲಿ ಯಾವ ರೀತಿಯಲ್ಲೂ ಪ್ರವೇಶಿಸಲು ತಮ್ಮ ಪಾರ್ಟಿ ಪ್ರವೇಶಿಸಲು ಇಚ್ಛಿಸಿಲ್ಲವೆಂದು ಕಾಂಗ್ರೆಸ್ ಹೈ ಕಮ್ಯಾಂಡು ಅಭಿಪ್ರಾಯ ವ್ಯಕ್ತಪಡಿಸಿದೆ.

ತರೀಕೆರೆ— ಪೋಲೀಸಿನವರು ಒಬ್ಬ ಹೆಂಡದ ಕಂಟ್ರಾಕ್ಟರರ ಸ್ಥಳದ ಮೇಲೆ ಧಾಳಿನಡೆಸಿ 8 ಮೂಟೆ ಸಕ್ಕರೆ ವಶಪಡಿಸಿಕೊಂಡರು – ಆ ಸಕ್ಕರೆ ಇಲ್ಲಿಯ ಒಂದು ಸಹಕಾರ ಸಂಘದಿಂದ ಕೊಂಡಿದುದೆಂದು ಹೇಳಲಾಗಿದೆ - ತನಿಖೆ ನಡೆಯುತ್ತಿದೆ.

ನವದೆಹಲಿ— ಏಷ್ಯಾ ಮತ್ತು ದೂರ ಪ್ರಾಚ್ಯದಲ್ಲಿ ಹೊಟ್ಟೆಗಿಲ್ಲದೆ, ಆಹಾರ ಕೊರತೆಯಿಂದ ನರಳುತ್ತಿರುವದು ತೀವ್ರಗೊಳ್ಳುತ್ತಿರುವದನ್ನು ತಪ್ಪಿಸುವದಕ್ಕೆ ಅಂತರರಾಷ್ಟ್ರೀಯ ಐಕ್ಯ ಸಾಮೂಹಿಕ ಕ್ರಮಕ್ಕಾಗಿ, 11 ನೇ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಪ್ರದೇಶಿಕ ಸಮ್ಮೇಳನವನ್ನು ಉದ್ಘಾಟಿಸುತ್ತ ಆಧ್ಯಕ್ಷ ಶ್ರೀ ವಿ ವಿ ಗಿರಿಯವರು ಕರೆಕೊಟ್ಟರು.

ಬೆಳಗಾಂ - ಪ್ರವಾಸ ಕ್ರಮದಿಂದ ಭಾರತಕ್ಕೆ 1940 ಕ್ಕೆ ಮುಂಚೆ ವರ್ಷಕ್ಕೆ ರೂ 100 ಕೋಟಿ ವಿದೇಶೀ ವಿನಿಮಯ ದೊರೆಯುವ ನಿರೀಕ್ಷೆಯಿದೆ ಎಂದು ಭಾರತ ಪ್ರವಾಸ ಸಚಿವೆ ಡಾ|| ಸರೋಜಿನಿ ಮಹಿಷಿ ಹೇಳಿದರು.

ಮೈಸೂರ್ ಸ್ಟೇಟ್ ಲಾಟರಿ

43ನೇ ಡ್ರಾ

ದಸರ-ದೀಪಾವಳಿ ಪ್ರಯುಕ್ತ ವಿಶೇಷ ಕೊಡುಗೆ

ರೂ.22,00,000

ಕ್ಕೂ ಹೆಚ್ಚು ಮೊತ್ತದ ಬಹುಮಾನಗಳು — 10 ಶ್ರೇಣಿಗಳಲ್ಲಿ

❋ ವಿಶೇಷ ಬಹುಮಾನ
ರೂ. 5,00,000 ಎಲ್ಲ ಶ್ರೇಣಿಗಳಿಗೂ ಅನ್ವಯಿಸುವಂತೆ

❋ ಮೊದಲ ಬಹುಮಾನ **ರೂ.25,000** ಅಥವಾ ಒಂದು ಟ್ರ್ಯಾಕ್ಟರ್ ಪ್ರತಿ ಶ್ರೇಣಿಗೆ

❋ ಎರಡನೇ ಬಹುಮಾನ **ರೂ.10,000** ಅಥವಾ ಒಂದು ಪವರ್ ಟಿಲ್ಲರ್ ಪ್ರತಿ ಶ್ರೇಣಿಗೆ

❋ 5 ಮೂರನೇ ಬಹುಮಾನಗಳು **ರೂ.5,000** ಅಥವಾ ಒಂದು 5 H.P. ಪಂಪ್‌ಸೆಟ್ ಪ್ರತಿ ಶ್ರೇಣಿಗೆ

❋ 10 ನಾಲ್ಕನೇ ಬಹುಮಾನಗಳು **ರೂ.1,000** ಪ್ರತಿ ಶ್ರೇಣಿಗೆ

❋ 20 ಐದನೇ ಬಹುಮಾನಗಳು **ರೂ.500** ಪ್ರತಿ ಶ್ರೇಣಿಗೆ

❋ 300 ಆರನೇ ಬಹುಮಾನಗಳು **ರೂ.100** ಪ್ರತಿ ಶ್ರೇಣಿಗೆ

❋ 500 ಏಳನೇ ಬಹುಮಾನಗಳು **ರೂ.50** ಪ್ರತಿ ಶ್ರೇಣಿಗೆ

ಡ್ರಾ ದಿನಾಂಕ
19-11-1972
ಪ್ರತಿ ಟಿಕೆಟ್ಟಿಗೆ
1 ರೂ ಮಾತ್ರ

❋ 3 ಲಕ್ಷ ರೂಪಾಯಿಗಳಿಗೂ ಹೆಚ್ಚು ಮೊತ್ತದ
6742 ಸಮಾಧಾನ ಬಹುಮಾನಗಳು

ಏಕೈಕ ಅಧಿಕೃತ ಮಾರಾಟಗಾರರು:

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್. ಲಾಟರಿ ವಿಭಾಗ

'ಹರಿ ನಿವಾಸ್'
36, ಕನ್ನಿಂಗ್‌ಹ್ಯಾಮ್ ರಸ್ತೆ,
ಬೆಂಗಳೂರು-52. ಫೋನ್ : 26713
ಶಾಖೆಗಳು: ಮುಂಬಯಿ, ಮದ್ರಾಸ್, ಹೊಸದಿಲ್ಲಿ.

ASPMSLD-3

ನಮ್ಮ ಹಿತಕ್ಕೆ ಆಗದುದನ್ನು ಇತರರ ವಿಷಯದಲ್ಲಿ ಮಾಡಬಾರದೆನ್ನುವುದೇ ಸರ್ವಧರ್ಮದ ಸಾರ. — ವ್ಯಾಸ